22.3.2022 110

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಸಿ.ಎನ್. ಮಂಜೇಗೌಡ ಹಾಗೂ ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರುಗಳಿಂದ ನಿಯಮ-330 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ಪ್ರಶ್ನೆ:**

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ದೇಶ ರಕ್ಷಣೆ ಮಾಡಿ, ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಮರು ನೇಮಕಾತಿಯಾದ ಮಾಜಿ ಸೈನಿಕ ಪೊಲೀಸ್ ಸಿಬ್ಬಂದಿಯನ್ನು ಅವರವರ ಜಿಲ್ಲೆಗಳಿಗೆ ವರ್ಗಾವಣೆ ಮಾಡುವ ಸಲುವಾಗಿ 7 ವರ್ಷ ಸೇವೆ ಸಲ್ಲಿಸುವ ನಿಯಮವನ್ನು ವಿಧಿಸಿರುವುದನ್ನು ಮಾಜಿ ಸೈನಿಕರಿಗೆ ವಿನಾಯಿತಿ ನೀಡಲು ಬೇಡಿಕೆ ಇರುತ್ತದೆ. ಭಾರತೀಯ ಸೇನೆಯಲ್ಲಿ ದೇಶ ರಕ್ಷಣೆ ಮಾಡಿ ದೇಶದ ನಾನಾ ಗಡಿ ಪ್ರದೇಶ/ಭಾಗಗಳಲ್ಲಿ ಸುಮಾರು 16 ರಿಂದ 26 ವರ್ಷಗಳ ಕಾಲ ಸೇವೆ ಸಲ್ಲಿಸಿ ಕಾರ್ಗಿಲ್, ಸಿಯಾಚಿನ್, ಗ್ಲೇಸಿಯರ್‌ದಂತಹ ಕಠಿಣ ಪ್ರದೇಶಗಳಲ್ಲಿ ಕುಟುಂಬದಿಂದ ದೂರವಿದ್ದು, ದೇಶದ ಗಡಿ ರಕ್ಷಣೆ ಮಾಡಿರುತ್ತಾರೆ. ನಿವೃತ್ತಿಯ ನಂತರ ಕುಟುಂಬದ ನಿರ್ವಹಣೆಯು ಪಿಂಚಣಿ ಹಣದಲ್ಲಿ ಕುಟುಂಬದ ಜೀವನ ಕಷ್ಟವಾಗಿರುತ್ತದೆ. ಮಾಜಿ ಸೈನಿಕರ ಕೋಟಾದಲ್ಲಿ ಪೊಲೀಸ್ ಇಲಾಖೆಯಲ್ಲಿ ಮರು ನೇಮಕಾತಿಯಾಗಿರುತ್ತಾರೆ. ಇವರು ಪೊಲೀಸ್ ಇಲಾಖೆಯಲ್ಲಿ ನೇಮಕಾತಿ ಹೊಂದುವ ಸಂದರ್ಭದಲ್ಲಿ ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಅತಿ ಕಡಿಮೆ ಹುದ್ದೆಗಳು ಇರುವ ಕಾರಣ, ಈ ಮಾಜಿ ಸೈನಿಕರು ಬೆಂಗಳೂರು ಜಿಲ್ಲೆಯನ್ನು ಮತ್ತು ಬೆಂಗಳೂರು ನಗರವನ್ನು ಆಯ್ಕೆ ಮಾಡಿಕೊಂಡು ನೇಮಕಾತಿ ಹೊಂದಿರುತ್ತಾರೆ. ಇವರು ನೇಮಕಾತಿ ಹೊಂದಿ ಬಂದಿ ಬಂದಂತಹ ಸಂದರ್ಭದಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಪ್ರೊಬೆಷನರಿ ಪಿರಿಯಡ್ ಮುಗಿದ ಮೇಲೆ ಅವರವರ ಜಿಲ್ಲೆಗೆ ಹೋಗಬಹುದೆಂಬ ಆಶಾಭಾವದಿಂದ ಮತ್ತು ಮೂರು ವರ್ಷಗಳ ನಂತರವಾದರೂ ಅವರ ತಂದೆ-ತಾಯಿ ಪರಿವಾರದ ಜೊತೆಗೆ ಇರಬಹುದೆಂದು ತಿಳಿದು ಬೆಂಗಳೂರು ನಗರಕ್ಕೆ ಆಯ್ಕೆಯಾಗಿ ಬಂದಿರುತ್ತಾರೆ.

ರಾಜ್ಯ ಪೊಲೀಸ್ ಇಲಾಖೆಯಿಂದ ಹೊರಡಿಸಿದ ಆದೇಶದ ಪ್ರಕಾರ 7 ವರ್ಷಗಳ ನಂತರ ವರ್ಗಾವಣೆ ಮಾಡಿಕೊಳ್ಳಲು ತೊಂದರೆಯಾಗುವುದರಿಂದ ಮಾಜಿ ಸೈನಿಕರಿಗೆ ಮಾನಸಿಕವಾಗಿ ಕಷ್ಟವಾಗುತ್ತಿದೆ. ಆದ್ದರಿಂದ ತಾವು ಈ ವಿಷಯವನ್ನು ಮಾನವೀಯತೆಯ ದೃಷ್ಟಿಯಿಂದ ಮತ್ತು ಮಾಜಿ ಸೈನಿಕರ ಮೇಲಿರುವ ಅಂತಃಕರಣೆಯಿಂದ ಅವರವರ ಜಿಲ್ಲೆಗೆ ವರ್ಗಾವಣೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕಾಗಿ ಕೋರುತ್ತಾ, ಇಂತಹ ಮಹತ್ವದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇವೆ.

**ಉತ್ತರ :**

ಇಲಾಖೆಯಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳು ಜಿಲ್ಲೆ ಮತ್ತು ವಲಯ ಮಟ್ಟದ ಹುದ್ದೆಗಳಾಗಿದ್ದು, ನೇಮಕಾತಿ ಅಧಿಸೂಚನೆಯಲ್ಲಿ ವಲಯ/ಜಿಲ್ಲಾವಾರು ಹುದ್ದೆಗಳ ವರ್ಗೀಕರಣವನ್ನು ನಮೂದಿಸಿ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುತ್ತದೆ. ಅಲ್ಲದೇ ಆಯಾ ಜಿಲ್ಲೆ/ವಲಯಗಳಲ್ಲಿ ನೇಮಕಾತಿಯಲ್ಲಿ ಮಾಜಿ ಸೈನಿಕರಿಗೆ ಶೇಕಡ 10 ರಷ್ಟು ಮೀಸಲಾತಿಯನ್ನು ಕಲ್ಪಿಸಿದ್ದು, ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗಿರುತ್ತದೆ. ಈ ರೀತಿ ಜಿಲ್ಲೆ ಮತ್ತು ವಲಯಗಳಲ್ಲಿ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾದ ಹುದ್ದೆಗಳಿಗೆ ಮಾಜಿ ಸೈನಿಕರು ಅವರಿಗೆ ಬೇಕಾದ ಜಿಲ್ಲೆ/ವಲಯಗಳಿಗೆ ಅರ್ಜಿ ಸಲ್ಲಿಸಿ ನೇಮಕಾತಿ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ.

ಪೊಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿ ಮತ್ತು ಡಿ ದರ್ಜೆಯ ನೌಕರರ ವರ್ಗಾವಣೆ ಕುರಿತು ಈ ಕಛೇರಿಯ ಸಂಖ್ಯೆ:ಸಿಬ್ಬಂದಿ(2)/121/2011-12, ದಿನಾಂಕ:17.04.2012 ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿದ್ದು, ನಂತರ ಈ ಸುತ್ತೋಲೆಗೆ ಈ ಕಛೇರಿಯ ಸಂಖ್ಯೆ:106/ಸಿಬ್ಬಂದಿ-1/ 2019-20, ದಿನಾಂಕ:22.08.2019 ಮತ್ತು 17.09.2019ರಲ್ಲಿ ತಿದ್ದುಪಡಿ ಮಾಡಿ ವರ್ಗಾವಣೆಗೆ ನೇಮಕಾತಿ ಹೊಂದಿದ ದಿನಾಂಕದಿಂದ ಕನಿಷ್ಠ 07 ವರ್ಷಗಳ ಸೇವಾವಧಿಯನ್ನು ನಿಗಧಿಗೊಳಿಸಲಾಗಿರುತ್ತದೆ. ಆದರೆ, ಪತಿ-ಪತ್ನಿ ಪ್ರಕರಣ, 2 ವರ್ಷಗಳಲ್ಲಿ ವಯೋನಿವೃತ್ತಿ ಹೊಂದುವ ಪ್ರಕರಣಗಳಲ್ಲಿ 7 ವರ್ಷದಿಂದ ವಿನಾಯಿತಿ ನೀಡಲಾಗಿರುತ್ತದೆ. ಈ ನಿಯಮವು ಮಾಜಿ ಸೈನಿಕರಿಗೂ ಅನ್ವಯಿಸುತ್ತದೆ.

**ಸದರಿ ವರ್ಗಾವಣೆ ಮಾರ್ಗಸೂಚಿಗಳನ್ನು, ಈ ಕೆಳಗಿನ ಅಂಶಗಳ ಆಧಾರದ ಮೇಲೆ ನಿರ್ಧರಿಸಲಾಗಿದೆ.**

1) ಪೊಲೀಸ್ ಸಿಬ್ಬಂದಿಯವರ ನೇಮಕವನ್ನು ಜಿಲ್ಲಾ/ವಲಯ/ಕಮೀಷನರೇಟ್ ಮಟ್ಟದ ನೇಮಕಾತಿ ಪ್ರಾಧಿಕಾರಿಗಳಿಂದ ನೇಮಕ ಮಾಡಲಾಗುತ್ತದೆ.
2) ಆಯಾ ಜಿಲ್ಲೆ/ವಲಯ/ಕಮೀಷನರೇಟ್‌ಗಳಲ್ಲಿಯೇ ನೇಮಕ ಹೊಂದಬಹುದಾಗಿದೆ. ಆದಾಗ್ಯೂ ಕೆಲವು ಸಿಬ್ಬಂದಿಯವರು ತಮ್ಮ ಇಷ್ಟಾನುಸಾರ ಮತ್ತು ಹುದ್ದೆಗಳ ಲಭ್ಯತೆಯ ಆಧಾರದ ಮೇಲೆ ಬೇರೆ ಜಿಲ್ಲೆ/ವಲಯ/ಕಮೀಷನರೇಟ್‌ಗಳಲ್ಲಿ ನೇಮಕಾತಿಗಾಗಿ ಅರ್ಜಿ ಸಲ್ಲಿಸುತ್ತಾರೆ.

..2

3) ಸದರಿ ಹುದ್ದೆಯ ಸಿಬ್ಬಂದಿಯವರಿಗೆ ನೇಮಕಾತಿ ನಂತರ ವೇತನ ಸಹಿತ 9 ತಿಂಗಳ ತರಬೇತಿಯನ್ನು ನೀಡಲಾಗುತ್ತದೆ.
4) ತರಬೇತಿಯ ನಂತರ ಸದರಿಯವರನ್ನು ತರಬೇತಿ ಅವಧಿಯೂ ಸೇರಿದಂತೆ ಎರಡೂವರೆ ವರ್ಷಗಳ ಅವಧಿಗೆ ಪರೀಕ್ಷಾರ್ಥ ಅವಧಿಯಲ್ಲಿ ಇಡಲಾಗುತ್ತದೆ.
5) ತರಬೇತಿ ಹಾಗೂ ಪರೀಕ್ಷಾರ್ಥ ಅವಧಿ ಮುಗಿದ ನಂತರ ಒಂದು ಘಟಕದಲ್ಲಿ ಕನಿಷ್ಠ ನಾಲ್ಕೂವರೆ ವರ್ಷಗಳ ಸೇವೆಯನ್ನು ಪೂರೈಸುವುದು ಇಲಾಖೆಯ ಹಿತ ದೃಷ್ಟಿಯಿಂದ ಉತ್ತಮವೆಂದು ಪರಿಗಣಿಸಿ ಸದರಿ ಸಿಬ್ಬಂದಿಯವರ ವರ್ಗಾವಣೆಗೆ 07 ವರ್ಷಗಳ ಕನಿಷ್ಠ ಅವಧಿಯನ್ನು ನಿಗಧಿಪಡಿಸಲಾಗಿದೆ.

ಈ ಕೆಳಗೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಇಲಾಖೆಯ ಕಾರ್ಯಕ್ಷಮತೆಯ ದೃಷ್ಟಿಯಿಂದ ಮಾಜಿ ಸೈನಿಕ ಮೀಸಲಾತಿಯಲ್ಲಿ ನೇಮಕ ಹೊಂದುವ ಸಿಬ್ಬಂದಿವರಿಗೆ 7 ವರ್ಷಗಳ ಸೇವಾವಧಿಯಿಂದ ವಿನಾಯಿತಿ ನೀಡುವುದು ಸೂಕ್ತವಾಗಿರುವುದಿಲ್ಲ.

1) ಮಾಜಿ ಸೈನಿಕರಿಗೆ ಆಯಾ ಜಿಲ್ಲೆ/ವಲಯಗಳಲ್ಲಿ ಲಭ್ಯವಿರುವ ಹುದ್ದೆಗಳಿಗನುಗುಣವಾಗಿ ಶೇಕಡ 10 ರಷ್ಟು ನೀಸಲಾತಿ ನೀಡಲಾಗುತ್ತಿದ್ದು, ಅವರುಗಳು ತಮ್ಮ ಆಯ್ಕೆ ಮತ್ತು ಅನುಕೂಲಕರವಾದ ಜಿಲ್ಲೆ/ವಲಯ/ಕಮೀಷನರೇಟ್‌ಗಳಿಗೆ ನೇಮಕಾತಿಗಾಗಿ ಅರ್ಜಿ ಸಲ್ಲಿಸಿ, ಆಯ್ಕೆಯಾಗುತ್ತಾರೆ.
2) ಅವರುಗಳು ತಮ್ಮ ಇಷ್ಟಾನುಸಾರವೇ ಜಿಲ್ಲೆ/ವಲಯ/ಕಮೀಷನರೇಟ್ ಆಯ್ಕೆ ಮಾಡಿಕೊಂಡು ನೇಮಕಾತಿ ಹೊಂದುವುದರಿಂದ ಅವರುಗಳಿಗೆ ಸ್ವ-ಜಿಲ್ಲೆ/ವಲಯಕ್ಕೆ ಹೋಗಲು ತರಬೇತಿ ಮತ್ತು ಪರೀಕ್ಷಾರ್ಥ ಅವಧಿಯೂ ಸೇರಿದಂತೆ ಕನಿಷ್ಠ 07 ವರ್ಷಗಳ ಅವಧಿ ನಿಗಧಿಪಡಿಸಿರುವುದು ಸೂಕ್ತವಾಗಿರುತ್ತದೆ.
3) ಕೇವಲ ಮಾಜಿ ಸೈನಿಕರಿಗೆ ಮಾತ್ರ ವಿನಾಯಿತಿ ನೀಡಿದಲ್ಲಿ ಉಳಿದ ಸಿಬ್ಬಂದಿಯವರಲ್ಲಿ ತಾರತಮ್ಯಕೆ ಅವಕಾಶವಾಗುತ್ತದೆ. ಅಲ್ಲದೇ ಅವರುಗಳು ಸಹ ಕುಟುಂಬ ಸಂರಕ್ಷಣೆ, ತಂದೆ-ತಾಯಿಯರ ಯೋಗಕ್ಷೇಮದ ಆಧಾರ ಇಂತಹ ಬೇಡಿಕೆಯನ್ನು ಸಲ್ಲಿಸುವ ಅವಕಾಶವಿದೆ.
4) ಮಾಜಿ ಸೈನಿಕರಿಗೆ ವಯೋಮಿತಿಯಲ್ಲಿ ರಿಯಾಯಿತಿ ನೀಡಲಾಗಿದ್ದು, ಅವರ ಸೈನಿಕ ಸೇವಾ ಅವಧಿಯ ನಂತರ 03 ವರ್ಷಗಳ ಕಾಲಾವಕಾಶ ನೀಡಲಾಗಿದೆ. ಇದರಿಂದಾಗಿ ಬಹುತೇಕ ನೇಮಕ ಹೊಂದುವ ಸಿಬ್ಬಂದಿಯವರು ಸರಾಸರಿ 40 ವರ್ಷ ವಯಸ್ಸಿನವರಾಗಿರುತ್ತಾರೆ. ಅಲ್ಲದೇ ಅವರ ವಯಸ್ಸಿನ ಆಧಾರದ ಮೇಲೆ ಅವರುಗಳಿಗೆ ದೈಹಿಕ ಸಹಿಷ್ಣುತೆಯಲ್ಲಿಯೂ ಸಹ ವಿನಾಯಿತಿ ನೀಡಲಾಗಿದೆ.
5) ಈ ರೀತಿ ಮಾಜಿ ಸೈನಿಕರಿಗೆ ವರ್ಗಾವಣೆಯ ಅವಧಿಯಲ್ಲಿ ನಿನಾಯಿತಿ ನೀಡಿದಲ್ಲಿ ಮಾಜಿ ಸೈನಿಕರ ಮೀಸಲಾತಿಯಲ್ಲಿಯೂ ಸಹ ಜಿಲ್ಲಾವಾರು/ವಲಯವಾರು/ಕಮೀಷನರೇಟ್‌ಗಳಲ್ಲಿ ವ್ಯತ್ಯಾಸವಾಗುತ್ತದೆ. ಯಾವುದೇ ಒಂದು ಘಟಕದಲ್ಲಿ ಶೇಕಡಾ 10ಕ್ಕಿಂತ ಹೆಚ್ಚಿನ ಸಂಖ್ಯೆಯ ಮಾಜಿ ಸೈನಿಕರು ಕಾರ್ಯ ನಿರ್ವಹಿಸಲು ಅವಕಾಶವಾಗುತ್ತದೆ. ಮಾಜಿ ಸೈನಿಕರ ನೇಮಕಾತಿ ವಯೋಮತಿ 40ಕ್ಕಿಂತ ಹೆಚ್ಚಿರುವುದರಿಂದ ಅವರಲ್ಲಿ ದೈಹಿಕ ಕಾರ್ಯಕ್ಷಮತೆ ಕಡಿಮೆಯಾಗಿರುವುದಲ್ಲದೇ, ಇದು ಇಲಾಖೆಯ ಕಾನೂನು ಮತ್ತು ಸುವ್ಯವಸ್ಥೆ ಮತ್ತು ಅಪರಾಧ ಪ್ರಕರಣಗಳ ಪತ್ತೆ ಹಚ್ಚಲು ಅನುಕೂಲಕರವಾಗುವುದಿಲ್ಲ.

ಆದ್ದರಿಂದ, ಮಾಜಿ ಸೈನಿಕ ಮೀಸಲಾತಿಯಡಿಯಲ್ಲಿ ನೇಮಕಾತಿ ಹೊಂದುವ ಪಿ.ಸಿ ಮತ್ತು ಪಿ.ಎಸ್.ಐ ರವರ ಖಾಯಂಪೂರ್ವ ಅವಧಿ ಇತ್ಯರ್ಥವಾದ ಕೂಡಲೇ ವರ್ಗಾವಣೆಗೆ ಪರಿಗಣಿಸುವಾಗ ಇವರ ಸೇವಾವಧಿಯು ಕೇವಲ 3 ರಿಂದ 4 ವರ್ಷಗಳಾಗಿರುವ ಕಾರಣ, ಪ್ರಸ್ತುತ ಜಾರಿಯಲ್ಲಿರುವ ಸುತ್ತೋಲೆಯನ್ವಯ ಅವರವರ ಜಿಲ್ಲೆಗೆ ವರ್ಗಾವಣೆ ಮಾಡುವ ಪ್ರಸ್ತಾವನೆಯನ್ನು ಪರಿಗಣಿಸಲು ಬರುವುದಿಲ್ಲ.

HD/52/PPS/2022 PS-B

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು